ತಿಳಿದೊಡನೆ ಹುಡುಗರು ಡ್ಯಾನ್ಸ್ ನಿಲ್ಲಿಸಿ ಅವರಲ್ಲಿ ಒಬ್ಬ ಹುಡುಗಿಯನ್ನು ನಾಲ್ಕು ಜನ ಹುಡುಗರು ಮುತ್ತಿಕೊಂಡರು. ಉಳಿದವರೆಲ್ಲ ನಿಶ್ಶಬ್ದವಾಗಿ ಕಣ್ಣು ಮುಚ್ಚಿಕೊಂಡಂತೆ ಅತ್ಯಾಚಾರ ಘಟನೆಯನ್ನು ಯಾನಾಕ್ಟ್ ಮಾಡಿದರು. ಆನಂತರ ಮತ್ತೆ ಒಂದು ಪ್ರಬೋಧಗೀತೆಯ ಪಲ್ಲವಿಯನ್ನು ಹಾಡಿದರು. ನಂತರ ಅವರೆಲ್ಲರೂ ಸೇರಿ ವೃತ್ತಾಕಾರವಾಗಿ ನಿಂತರು.

ಆ ಗುಂಪಿನ ಒಬ್ಬ ಹುಡುಗ ಒಬ್ಬ ಹುಡುಗಿ ಅವರ ಮಧ್ಯೆ ಸುತ್ತುತ್ತ "ಡಿಯರ್ ಸಿಟಿಜನ್ಸ್, ನಮ್ಮೆಲ್ಲರಿಗೂ ಗೊತ್ತಿದೆ. ಆ ದಿನ 'ನಿರ್ಭಯ' ಘಟನೆ ನಡೆದಾಗ ದೇಶದಲ್ಲಿನ ಯುವ ಪೀಳಿಗೆ ಒಂದಾಗಿ ಆ ಘಟನೆಯನ್ನು ಖಂಡಿಸಿತು. ನ್ಯಾಯಕ್ಕಾಗಿ ಹೋರಾಡಿದೆವು. ಅದೇ ರೀತಿ ನಮ್ಮ ನಗರದಲ್ಲಿ ಅತ್ಯಾಚಾರಕ್ಕೆ ಒಳಗಾದ 'ಅಭಯ'ಳಿಗೆ ನ್ಯಾಯ ಸಿಗಬೇಕೆಂದು ಹೋರಾಡಿದೆವು. ಈಗಲೂ ಈ ದೇಶದಲ್ಲಿ ನಮ್ಮ ನಗರಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತಲೇ ಇವೆ. ನಮ್ಮ ನಗರದಲ್ಲಿ 'ಅಜೇಯ'ಳ ಮೇಲೆ ನಡೆದ ಅತ್ಯಾಚಾರದ ಬಗ್ಗೆ ನಮ್ಮೆಲ್ಲರಿಗೂ ಗೊತ್ತಿದೆ. ನಾಳೆ ಕೋರ್ಟಿನಲ್ಲಿ ಆ ಅಪರಾಧಿಗಳಿಗೆ ಶಿಕ್ಷೆಯಾಗಲಿದೆ. 'ಅಜೇಯ'ಳಿಗೆ ನ್ಯಾಯ ಸಿಗಲೆಂದು ಈ ನಗರದಲ್ಲಿ ಮತ್ತೊಮ್ಮೆ ಇಂತಹ ಘಟನೆ ನಡೆಯದಿರಲೆಂದು ಬಯಸೋಣ. ರೆಸ್ಪೆಕ್ಟ್ ವುಮೆನ್... ಮಹಿಳೆಯರನ್ನು ಗೌರವಿಸೋಣ" ಎಂದು ಅವರಿಬ್ಬರೂ ಒಬ್ಬರಾದ ನಂತರ ಮತ್ತೊಬ್ಬರು ಭಾವನಾತ್ಮಕವಾಗಿ ಘೋಷಣೆಗಳನ್ನು ಕೂಗುತ್ತಿದ್ದರೆ ನಿಶ್ಶಬ್ದವಾಗಿ ಕೇಳುತ್ತಿದ್ದ ಆ ಗುಂಪಿನಲ್ಲಿಯ ಒಬ್ಬರು "ಅಜೇಯ ನಿನ್ನೊಂದಿಗೆ ನಾವಿದ್ದೇವೆ..." ಎಂದೊಡನೆ "ವೀ ವಾಂಟ್ ಜಸ್ಟಿಸ್" ಎಂದು ಒಂದು ಗುಂಪು ಘೋಷಣೆಗಳನ್ನು ಕೂಗಿತು. "ವೀ ವಾಂಟ್..." ಎಂದು ಕೆಲವರು "ಜಸ್ಟಿಸ್" ಎಂದು ಇನ್ನು ಕೆಲವರು ಕೂಗತೊಡಗಿದರು. ಘೋಷಣೆಗಳಿಂದ ಚಪ್ಪಾಳೆಯಿಂದ ಆ ಮಾಲ್ ಮೊಳಗಿತು.

ಚಪ್ಪಾಳೆ ತಟ್ಟುತ್ತಾ "ಜಸ್ಟಿಸ್ ಫರ್ ಅಜೇಯ" ಎಂದು ಎಲ್ಲರೊಂದಿಗೆ ಧ್ವನಿಗೂಡಿಸಿದ ನಾನು ಒಮ್ಮೆಗೇ ನನ್ನ ಕೈಗಳೆಡೆ ನೋಡಿಕೊಳ್ಳುತ್ತ "ಜಸ್ಟಿಸ್ ಫರ್ ಅ..." ಬಾಯಲ್ಲಿಯ ಮಾತು ಬಾಯಲ್ಲಿಯೇ ನಿಂತು ಚಪ್ಪಾಳೆ ತಟ್ಟಲಿದ್ದ ನನ್ನೆರಡು ಕೈಗಳು ಹಾಗೆಯೇ ನಿಂತು ಬಿಟ್ಟವು.

'ಅಜೇಯ... ಅಜೇಯ... ಅಜೇಯ... ಯಾರೀ 'ಅಜೇಯ?' ಎಲ್ಲಿಯೋ ಕೇಳಿದಂತಿದೆ. ಹೌದು, ಹೌದು... ತಾನೆ... ತಾನು ತುಂಬಾ ಪ್ರಜ್ಞಾಪೂರ್ವಕವಾಗಿ ನೆನಪಿಟ್ಟುಕೊಳ್ಳುತ್ತಿದ್ದರೂ ತನ್ನ ಹೆಸರನ್ನು ತಾನು ಮರೆಯುತ್ತಲೇ ಇದ್ದಾಳೆ. ತನ್ನ ಸುಪ್ತಪ್ರಜ್ಞೆ ಇಷ್ಟು ತಿಂಗಳಾದರೂ ಈ ಹೆಸರನ್ನು ಇನ್ನೂ ಜೀರ್ಣಿಸಿಕೊಳ್ಳಲೊಲ್ಲದು. ನಾನೇ ಅಲ್ಲವೆ, ನಾನೇ ನಾನೇ... ಇದೇಕೆ ನಾನೇಕೆ ಚಪ್ಪಾಳೆ ಹೊಡೆಯುತ್ತಿದ್ದೇನೆ. ನಾನೇಕೆ ಘೋಷಣೆಗಳನ್ನು ಕೂಗುತ್ತಿದ್ದೇನೆ' ಸ್ಕಾರ್ಫ್‌ನಿಂದ ಮುಖಕ್ಕೆ ಕಟ್ಟಿಕೊಂಡ ಮಾಸ್ಕನ್ನು ಮತ್ತಷ್ಟು ಮೇಲೆಳೆದುಕೊಂಡು ಅಲ್ಲಿಂದ ಎಸ್ಕಲೇಟರ್ ಮೂಲಕ ಕೆಳಗೆ ಬರುತ್ತಿದ್ದಂತೆ 'ನನ್ನ ಜೀವನ ಇಷ್ಟೇ ವೇಗವಾಗಿ ಕೆಳಗೆ ಜಾರಿ ಬಿಟ್ಟಿತಲ್ಲ? ನಿಜಕ್ಕೆ... ನನ್ನ ಈ ಆಲೋಚನೆಗಳೆಲ್ಲ ಚೆಲ್ಲಾಪಿಲ್ಲಿಯಾಗುತ್ತಿದ್ದಂತೆ "ಸಾಯಂಕಾಲ ಕ್ಯಾಂಡಿಲ್ ಲೈಟ್ ರ್ಯಾಲಿ ಇದೆ. 'ಅಜೇಯ'ಳ ವಿಷಯದಲ್ಲಿ ನಾಳೆ ಪ್ರಕಟವಾಗಲಿರುವ ಶಿಕ್ಷೆ ಮಹಿಳೆಯರ ಮೇಲೆ ಅತ್ಯಾಚಾರ ಮಾಡುವ ಮೃಗಗಳಿಗೆ ಪಾಠವಾಗಲೆಂದು ಆಶಿಸೋಣ. ಜಸ್ಟಿ..." ಅವರ ಮಾತುಗಳು ಕಿವಿಗಳ ಮೇಲೆ ಅಪ್ಪಳಿಸುತ್ತಲೇ ಇವೆ.

ಪ್ರದರ್ಶನದಲ್ಲಿ ಸಂದರ್ಶಕರನ್ನು ನೋಡಿ ಬೆದರಿ ಓಡಿ ಹೋಗಿ ಬಿಲಕ್ಕಾಗಿ ಹಾತೊರೆಯುವ ಬಿಳಿ ಇಲಿಯಂತೆ ಅಲ್ಲಿಂದ ರಸ್ತೆಗೆ ಓಡಿದೆ.

ಟ್ರಾಫಿಕ್‌ನಿಂದ ಕಿಕ್ಕಿರಿದ ಆ ರಸ್ತೆಯ ಒಂದು ಬದಿಗೆ ನಡೆಯುತ್ತಿದ್ದೇನೆ. ಥೇಟ್ ನನ್ನಂತೆಯೇ